ದಿನಾಂಕ:14-09-2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಎಸ್ ಸಿ ವಕೀಲರಿಂದಃ

10. ಸಾರ್ವಜನಿಕರಿಗೆ ಹಣವನ್ನು ಸಾಲವಾಗಿ ನೀಡಲು ಲೈಸನ್ಸ ಇದೆಯೇ ಎಂದರೆ ನಾನು ಬಡ್ಡಿಗಾಗಿ ಯಾರಿಗೂ ಹಣವನ್ನು ನೀಡಿರುವುದಿಲ್ಲ ಮತ್ತು ಲೈಸನ್ಸ ಇರುವುದಿಲ್ಲ. ಗೋಕಾಕಿನಲ್ಲಿ ಯಾರ ಕಚೇರಿಗೆ ಬಂದಿರುತ್ತಿರಿ ಎಂದರೆ ಗೋಟಡಕಿ ರವರ ಕಚೇರಿಗೆ ಬಂದಿರುತ್ತೇವೆ. ನಿಮ್ಮ ಪತ್ರವನ್ನು ಬರೆಯುವ ಮೊದಲು ಗೋಟಡಕಿರವರು ಎಷ್ಟು ಪತ್ರವನ್ನು ಬರೆದಿದ್ದರು ಎಂದರೆ ಗೊತ್ತಿಲ್ಲ. ಹಾಗಾದರೆ ನೀವು ಆ ಸಂದರ್ಭದಲ್ಲಿ ಗೋಟಡಕಿರವರ ಕಚೇರಿಯಲ್ಲಿ ಇರಲಿಲ್ಲ ಎಂದರೆ ಸರಿ. ನಮ್ಮ ಪತ್ರ ಬರೆಯುವ ಸಂದರ್ಭದಲ್ಲಿ ನಾನು ಹಾಜರಿದ್ದೆ. ನಿಮ್ಮ ಪತ್ರ ಬರೆಯುವವರೆಗೊ ನೀವು ಅಲ್ಲಿ ಇರಲಿಲ್ಲವೇ ಎಂದರೆ ನಾನು ಅಲ್ಲಿಯೇ ಇದ್ದೆ. ನಿಮ್ಮ ಕಾಗದವನ್ನು ಎಷ್ಟು ಗಂಟೆಗೆ ಬಂದಿರುತ್ತಾರೆ ಎಂದರೆ 11.00 ಗಂಟೆಗೆ ಬರೆದಿರುತ್ತಾರೆ. ಕಾಗದವನ್ನು ಯಾವುದರಲ್ಲಿ ತಯಾರು ಮಾಡಿರುತ್ತಾರೆ ಎಂದರೆ ಅವರು ಹೇಳಿದ ಮಾಹಿತಿಯನ್ನು ಕಚ್ಚಾ ಹಾಳೆಯಲ್ಲಿ ಬರೆದುಕೊಂಡಿರುತ್ತಾರೆ. ಮಾಹಿತಿ ತೆಗೆದುಕೊಳ್ಳಲು ಎಷ್ಟು ಸಮಯ ತೆಗೆದುಕೊಂಡಿರುತ್ತಾರೆ ಎಂದರೆ 1 ಗಂಟೆ ಸಮಯ ತೆಗೆದುಕೊಂಡಿರುತ್ತಾರೆ. ಮಾಹಿತಿ ತೆಗೆದುಕೊಂಡ ನಂತರ ನಮಗೆ ಓದಿ ತಿಳಿಸಿರುತ್ತಾರೆ. ನಂತರ ಟೈಪ ಮಾಡಿಸಿರುತ್ತಾರೆ. ಅನಂತರ ನಾನು ಮತ್ತು ಅವರು ಸಹಿ ಮಾಡಿರುತ್ತೇವೆ. ಪತ್ರವನ್ನು ಟೈಪಿಂಗ ಮಷಿನನಲ್ಲಿ ಮಾಡಿರುತ್ತಾರೆ. ಟೈಪಿಂಗ ಮಾಡಲು ಮಾಹಿತಿಯನ್ನು ಯಾರು ನೀಡಿರುತ್ತಾರೆ ಎಂದರೆ ಪ್ರತಿವಾದಿಗಳು ನೀಡಿರುತ್ತಾರೆ. ಮಾಹಿತಿ ಕೊಟ್ಟ 1 ಗಂಟೆ ನಂತರ ಪತ್ರ ತಯಾರಾಗಿರುತ್ತದೆ. ಸದರಿ ಪತ್ರವನ್ನು ಬಿಳಿ ಹಾಳೆಯಲ್ಲಿ ಟೈಪು ಮಾಡಿರುತ್ತಾರೆ.

11. ಗೋಟಡಕಿ ರವರ ಕಚೇರಿಯಲ್ಲಿ ಕೊಟ್ಟಿದ್ದೇವೆ ಎಂದು ಹೇಳುವ 15 ಲಕ್ಷ ರೂಗಳ ಮುಖಬೆಲೆ ಏನು ಇತ್ತು ಎಂದರೆ 200, 500, 100 ರ ಮುಖಬೆಲೆಯ ನೋಟುಗಳು ಇದ್ದವು. 200, 500, 100 ರ ಮುಖಬೆಲೆಯ ಎಷ್ಟೇಷ್ಟು ನೋಟುಗಳು ಇದ್ದವು ಎಂದರೆ ಗೊತ್ತಿಲ್ಲ. 15 ಲಕ್ಷ ರೂಗಳನ್ನು ಏಣಿಕೆ ಮಾಡಲು ಎಷ್ಟು ಸಮಯವಾಗಿರುತ್ತದೆ ಎಂದರೆ 15 ನಿಮಿಷವಾಗಿರುತ್ತದೆ. 15 ಲಕ್ಷ ನೀಡುವ ಸಂದರ್ಭದಲ್ಲಿ ಗೋಟಡಕಿ ರವರು ಇದ್ದರೇ ಎಂದರೆ ಇದ್ದರು. ಕಾಗದವನ್ನು ಹಾಜರು ಮಾಡಲು ಗೋಟಡಕಿ ರವರು ಬಂದಿದ್ದರೇ ಎಂದರೆ ಬಂದಿರಲಿಲ್ಲ, ಪತ್ರವನ್ನು ತಯಾರಾದ ನಂತರ ನಮಗೆ ನೀಡಿದ್ದು, ನಾವು ನೊಂದಣಾಧಿಕಾರಿಗಳ ಕಚೇರಿಗೆ ಹೋಗಿರುತ್ತೇವೆ. ನೊಂದಣಾಧಿಕಾರಿಗಳ ಕಚೇರಿಯಲ್ಲಿ ಕಾಗದವನ್ನು ಯಾರು ಹಾಜರು ಮಾಡಿರುತ್ತಾರೆ ಎಂದರೆ ನಾನೇ ಹಾಜರು ಮಾಡಿರುತ್ತೇನೆ. ಆಗ ಸಮಯ 1.30 ಆಗಿದ್ದರಿಂದ ಮತ್ತು ಲೌಕಡೌನ ಇದ್ದುದ್ದರಿಂದ ಕಚೇರಿಯ 2.00 ಗಂಟೆ ವರೆಗೆ ಕೆಲಸ ಮಾಡುತ್ತಿದ್ದರಿಂದ ನೊಂದಣಿಯಾಗಿರುವುದಿಲ್ಲ. ಕಾಗದವನ್ನು ನಮಗೆ ನೀಡಿರುತ್ತಾರೆ. ಪುನಃ ದಿಃ8/6/2020 ರಂದು ಹೋಗಿರುತ್ತೇವೆ. ಆ ದಿನ ನಾನೇ ಕಾಗದವನ್ನು ತೆಗೆದುಕೊಂಡು ಹೋಗಿರುತ್ತೇನೆ. ಅಲ್ಲಿಯವರೆಗೆ ಕಾಗದ ನನ್ನ ಬಳಿಯೇ ಇತ್ತು. ಆ ದಿನ ಬೆಳಿಗ್ಗ 9 ಗಂಟೆಗೆ ಕಚೇರಿಯಲ್ಲಿದ್ದೆ, ಬೆಳಿಗ್ಗ 10 ಗಂಟೆಗೆ ಕಚೇರಿ ಪ್ರಾರಂಭವಾಗಿರುತ್ತದೆ. ಆ ದಿನ ಗೋಟಡಕಿರವರ ಕಚೇರಿಗೆ ಹೋಗಿರುವುದಿಲ್ಲ, ನೇರವಾಗಿ ನೊಂದಣಾಧಿಕಾರಿಗಳ ಕಚೇರಿಗೆ ಹೋಗಿರುತ್ತೇವೆ.

12. ಮೊದಲ ದಿನ ನೊಂದಣಾಧಿಕಾರಿಗಳ ಕಚೇರಿಗೆ ಹೋದಾಗ ನಮ್ಮಕ್ಕಿಂತ ಪೂರ್ವದಲ್ಲಿ ಅನೇಕ ಜನರು ಬಂದಿದ್ದರು. ದಿಃ8/6/2020 ರಂದು ನೊಂದಣಾಧಿಕಾರಿಗಳು ನಮ್ಮ ಪತ್ರವನ್ನು ಮೊದಲಿಗೆ ತೆಗೆದುಕೊಂಡಿರುತ್ತಾರೆ.

ನೊಂದಣಾಧಿಕಾರಿಗಳು ನಿಮ್ಮ ಪತ್ರವನ್ನು ಓದಿ ಮುಗಿಸಲು ಎಷ್ಟು ಸಮಯ ತೆಗೆದುಕೊಂಡಿರುತ್ತಾರೆ ಅರ್ಧ ಗಂಟೆ ತೆಗೆದುಕೊಂಡಿರುತ್ತಾರೆ. ಓದಿದ ನಂತರ ನೊಂದಣಾಧಿಕಾರಿಗಳು ಪ್ರತಿವಾದಿಗಳನ್ನು ಕೇಳಿದ್ದು, ಪ್ರತಿವಾದಿಗಳು ಎಲ್ಲಾ ಸರಿಯಾಗಿದೆ ನಮಗೆ ಹಣ ಮುಟ್ಟಿದೆ ಎಂದು ಹೇಳಿರುತ್ತಾರೆ. ದಿಃ8/6/2020 ರಂದು ಪತ್ರ ನೊಂದಣಿಯಾಗಿರುತ್ತದೆ. 4 ದಿನಗಳ ನಂತರ ಪತ್ರವನ್ನು ನಮಗೆ ನೀಡಿರುತ್ತಾರೆ. 11-ಇ ನಕಾಶೆಯನ್ನು ಮಾಡಿಸಲು ನೀವೇನಾದರೂ ಪ್ರತಿವಾದಿಗಳೊಂದಿಗೆ ಸಹಕರಿಸಿರುತ್ತಿರಾ ಎಂದರೆ ಅವರು 2 ವರ್ಷದೊಳಗಾಗಿ ಮಾಡಿಕೊಡುವುದಾಗಿ ತಿಳಿಸಿದ್ದರಿಂದ ನಾನು ಹೋಗಿರುವುದಿಲ್ಲ. 2 ವರ್ಷದೊಳಗಾಗಿ 1 ಲಕ್ಷ ಹಣವನ್ನು ಜೋಡಿಸಿರುತ್ತೇನೆ ಎಂದು ನ್ಯಾಯಾಲಯಕ್ಕೆ ಯಾವುದಾದರೂ ದಾಖಲೆಯನ್ನು ಹಾಜರು ಮಾಡಿದ್ದಿರಾ ಎಂದರೆ ಮಾಡಿರುವುದಿಲ್ಲ. 1 ಲಕ್ಷ ಹಣ ಮತ್ತು ನೊಂದಣಿ ಖರ್ಚನ್ನು ತಯಾರು ಮಾಡಿಕೊಂಡಿದ್ದೇನೆ ಎಂದು ಹೇಳುವ ದಾಖಲೆ ಇದೆಯೇ ಎಂದರೆ ಹಣ ನಮ್ಮ ಬಳಿ ಇತ್ತು. 2 ವರ್ಷದ ಅವಧಿಯೊಳಗೆ 11-ಇ ನಕಾಶೆಯನ್ನು ತಯಾರಿಸಿ ನೊಂದಣಿ ಮಾಡಿಕೊಡುವಂತೆ ಪ್ರತಿವಾದಿಗಳಿಗೆ ನೋಟಿಸನ್ನು ಕೊಡಲು ತೊಂದರೆ ಇರಲಿಲ್ಲ ಎಂದರೆ ಊರಿನಲ್ಲಿ ಭೇಟಿಯಾದಾಗ ಕ್ರಯ ಪತ್ರವನ್ನು ಮಾಡಿಕೊಡುವಂತೆ ಕೇಳುತ್ತಿದ್ದೆ. 2 ವರ್ಷದ ನಂತರ ವಕೀಲರ ಮುಖಾಂತರ ನೋಟಿಸನ್ನು ನೀಡಿರುತ್ತೇನೆ. ಎಷ್ಟು ಬಾರಿ ಪ್ರತಿವಾದಿಗಳನ್ನು ಭೇಟಿಯಾಗಿರುತ್ತಿರಿ ಎಂದರೆ ತಿಂಗಳಿಗೊಮ್ಮೆ ಪ್ರತಿವಾದಿಗಳನ್ನು ಕೇಳಿರುತ್ತೇನೆ. ಆ ಸಂದರ್ಭದಲ್ಲಿ ಹಿರಿಯರನ್ನು ಹೊರತು ಪಡಿಸಿ ಬೇರೆ ಯಾರಾದರೂ ಇದ್ದರೆ ಎಂದರೆ ಶಿವರಾಯಿ ಬಸಲಿಂಗಪ್ಪ ಗುದ್ಲಿ, ಬಸವಲಿಂಗ ಸೀಗೆಹಳ್ಳಿ, ಶಿವಬಸ್ಸು ಹಾದಿಮನಿ, ದುಂಡಪ್ಪ ಅಪ್ಪಯ್ಯಾ ಗುದ್ಲಿ ಇದ್ದರು. ಮೇಲೆ ಹೇಳಿದ ವ್ಯಕ್ತಿಗಳು ನನ್ನ ಸಂಬಂಧಿಗಳು ಎಂದರೆ ಸರಿಯಲ್ಲ. ಶಿವರಾಯಿ ಮತ್ತು ದುಂಡಪ್ಪ ಗುದ್ಲಿರವರು ನನ್ನ ದೊಡ್ಡಪ್ಪಂದಿರು.

ಯಾವ ಯಾವ ತಿಂಗಳಿನಲ್ಲಿ ಯಾವ ದಿನಾಂಕದಂದು ಭೇಟಿಯಾಗಿರುತ್ತಿರಿ ಎಂದು ಹೇಳಲು ಆಗುತ್ತದೆಯೇ ಎಂದರೆ ಆಗುವುದಿಲ್ಲ.

13. ಬಾಕಿ ಹಣ ಮತ್ತು ನೊಂದಣಿ ಹಣವನ್ನು ಹೊಂದಿಸಿಕೊಂಡಿದ್ದೇನೆಂದು ಮತ್ತು ಪ್ರತಿವಾದಿಗಳು ಮೊದಲೇ ಕ್ರಯಪತ್ರವನ್ನು ಮಾಡಿಕೊಡುತ್ತೇವೆ ಎಂದು ಹೇಳಿದ್ದರಿಂದ ದಾವೆಯನ್ನು ಸಲ್ಲಿಸಿರುವುದಿಲ್ಲ. ಪ್ರತಿವಾದಿಗಳು ನನ್ನಿಂದ ಬಡ್ಡಿಗಾಗಿ ಪಡೆದಿದ್ದ ಹಣವನ್ನು ದಿಃ12/12/2021 ರಂದು ಶೇ.8 ರಂತೆ 1 ಲಕ್ಷದ 36 ಸಾವಿರ ಮತ್ತು ಅಸಲು 9 ಲಕ್ಷದ 50 ಸಾವಿರ ರೂಗಳನ್ನು ಮರುಪಾವತಿಸಿದ್ದರಿಂದ ದಿಃ13/12/2021 ರಂದು ರದ್ದತಿ ಪತ್ರವನ್ನು ಬರೆಯಲಾಗಿರುತ್ತದೆ ಎಂದರೆ ಸರಿಯಲ್ಲ. ನನಗೆ ಬರಬೇಕಾಗಿದ್ದ ಅಸಲು ಮತ್ತು ಬಡ್ಡಿ ಹಣ ಬಂದಿದ್ದರಿಂದ ರದ್ದತಿ ಪತ್ರವನ್ನು ತಯಾರು ಮಾಡಿಕೊಡಲು ನಾನು ಸೂಚಿಸಿದ್ದರಿಂದ ಪ್ರತಿವಾದಿಗಳು ರದ್ದತಿ ಪತ್ರವನ್ನು ತಯಾರು ಮಾಡಿಕೊಂಡು ಅದಕ್ಕೆ ಸಂಬಂಧಿಸಿದ ಶುಲ್ಕವನ್ನು ಪಾವತಿಸಿದ್ದರೂ ನಾನು ಹೆಚ್ಚಿನ ಬಡ್ಡಿ ಹಣವನ್ನು ಕೊಡಬೇಕೆಂದು ಸದರಿ ರದ್ದತಿ ಪತ್ರಕ್ಕೆ ಸಹಿ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ಕ್ರಯದ ಕರಾರು ಪತ್ರದಲ್ಲಿ ನಮೂದಿಸಿದ 15 ಲಕ್ಷ ಹಣ ಅಸಲು ಮತ್ತು 3 ವರ್ಷದ ಬಡ್ಡಿ ಸೇರಿಸಿದ ಹಣವಾಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನಾನು ನೀಡಿರುವ ನೋಟಿಸಿಗೆ ಪ್ರತ್ಯೋತ್ತರವನ್ನು ನೀಡಿದ್ದಾರೆ ಎಂದರೆ ಸುಳ್ಳು ಪ್ರತ್ಯೋತ್ತರವನ್ನು ನೀಡಿರುತ್ತಾರೆ. ನಾನು ವಕೀಲರ ಮುಖಾಂತರ ನೀಡಿರುವ ನೋಟಿಸು ಸುಳ್ಳು ನೋಟಿಸು ಆಗಿರುತ್ತದೆ ಎಂದರೆ ಸರಿಯಲ್ಲ.

14. ವಾದಪತ್ರದಲ್ಲಿ ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಪ್ರತಿವಾದಿಗಳಿಗೆ ಮನೆಯ ಅಡಚಣೆ ಇದ್ದುದ್ದರಿಂದ ಹೊಲವನ್ನು ಮಾರಾಟಕ್ಕೆ

ಇಟ್ಟಿದ್ದರು ಎಂದು ಬರೆಸಿರುತ್ತೇನೆ ಎಂದರೆ ಸರಿ. ಯಾರ ಯಾರ ಬಳಿ ಸಾಲ ಪಡೆದಿದ್ದರು ಎಂದು ವಿಚಾರ ಮಾಡಿರುತ್ತಿರಾ ಎಂದರೆ ಮಾಡಿರುವುದಿಲ್ಲ. ವಾದಪತ್ರದಲ್ಲಿ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಪ್ರತಿವಾದಿಗಳು ಯಾರ ಯಾರ ಬಳಿ ಸಾಲ ಮಾಡಿದ್ದರು ಎಂದು ನಮೂದಿಸಿಲ್ಲ ಎಂದರೆ ಸರಿ. ಉತಾರಿನಲ್ಲಿ ಅಪ್ಪರಾಯಪ್ಪ ರವರ ಹೆಸರು ಪ್ರತಿವಾದಿಗಳೊಂದಿಗೆ ಜಂಟಿಯಾಗಿರುವುದರಿದ ಅವರ ಒಪ್ಪಿಗೆ ಪತ್ರವನ್ನು ತೆಗೆದುಕೊಳ್ಳುಲು ತೊಂದರೆ ಇತ್ತೇ ಎಂದರೆ ತೊಂದರೆ ಇರಲಿಲ್ಲ. ನಾನು ಅವರ ಜಮೀನನ್ನು ಖರೀದಿಸಿರುವುದಿಲ್ಲ, ಆದ್ದರಿಂದ ಅವರ ಒಪ್ಪಿಗೆ ಪಡೆದಿರುವುದಿಲ್ಲ. ನನ್ನ ಪ್ರಕಾರ ಪ್ರತಿವಾದಿಗಳ ಜಮೀನು ಅಪ್ಪಾರಾಯಪ್ಪ ರವರ ಜಮೀನುಗಳು ಬೇರೆ ಬೇರೆ ಜಮೀನುಗಳು ಎಂದರೆ ಸರಿ. ಬೇರೆ ಬೇರೆ ಜಮೀನುಗಳಾಗಿದ್ದರಿಂದ 15 ಲಕ್ಷ ಹಣವನ್ನು ಕೊಟ್ಟಿದ್ದೇನೆಂದು ಹೇಳಿದ ದಿನವೇ ಕ್ರಯ ಪತ್ರವನ್ನು ಮಾಡಿಸಿಕೊಳ್ಳಲು ಏನು ತೊಂದರೆ ಇತ್ತೇ ಎಂದರೆ ಅಪ್ಪಾರಾಯಪ್ಪ ಮತ್ತು ಪ್ರತಿವಾದಿಗಳ ನಡುವೆ ವಿಭಾಗ ಆಗದೆ ಇದ್ದುದ್ದರಿಂದ ಮತ್ತು 2 ವರ್ಷಗಳ ಕಾಲಾವಕಾಶ ಕೋರಿದ್ದರಿಂದ ಅದೇ ದಿನ ಕ್ರಯ ಪತ್ರ ಮಾಡಿಕೊಂಡಿರುವುದಿಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯನ್ನು ಕೋರಿರುತ್ತಾರೆ. ಆದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ

(ಶ್ರೀಮತಿ ದೀಪಾ ಜಿ.)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ